ಭಾರತದ ಅಭಿವೃದ್ಧಿಯ ಬಗ್ಗೆ ಮಾತನಾಡುವಾಗ ಹಳ್ಳಿ ಮತ್ತು ರೈತನ ಏಳಿಗೆಯ ಬಗ್ಗೆ ಮಾತನಾಡುತ್ತೇವೆ. ಆದರೆ, ಇಂಥ ಮಾತುಗಳು ಭಾವುಕವಾಗಿರುತ್ತವೆಯೇ ಹೊರತು, ವಾಸ್ತವದ ನೆಲೆಗಟ್ಟಿಗೆ ಹತ್ತಿರವಾಗಿರುವುದಿಲ್ಲ. ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸರ್ಕಾರ ಮತ್ತು ಆಡಳಿತಶಾಹಿ ತೋರಬೇಕಾದ ಪ್ರಾಮಾಣಿಕತೆ ಮತ್ತು ಇಚ್ಛಾಶಕ್ತಿಯ ಕೊರತೆಯ ಕಾರಣದಿಂದಲೂ ಹಳ್ಳಿ ಮತ್ತು ರೈತ, ಸಮಸ್ಯೆಗಳ ಸುಳಿಯಿಂದ ಹೊರಬರಲು ಸಾಧ್ಯವಾಗಿಲ್ಲ. ಗ್ರಾಮಗಳ ಸ್ವಾವಲಂಬನೆಯಲ್ಲಿ ದೇಶದ ಹಿತವಿದೆ ಎನ್ನುವ ಗಾಂಧೀಜಿಯ ಸ್ವರಾಜ್ಯದ ಪರಿಕಲ್ಪನೆ ಕಾರ್ಯರೂಪಕ್ಕೆ ಬಂದಿಲ್ಲ. ಈ ಹತಾಶೆಯ ನಡುವೆಯೂ ದೇಶದ ಕೆಲವು ಹಳ್ಳಿಗಳು ತಮ್ಮದೇ ಆದ ಕಾರ್ಯವಿಧಾನದ ಮೂಲಕ ಸ್ವಾವಲಂಬನೆಯ ಹಾದಿಯಲ್ಲಿ ದಿಟ್ಟ ಹೆಜ್ಜೆಯಿಟ್ಟಿವೆ. ಮಾದರಿ ಹಳ್ಳಿಗಳನ್ನು ರೂಪಿಸಿರುವ ಗ್ರಾಮ ಪಂಚಾಯಿತಿಗಳು ದೇಶದ ಆಡಳಿತ ಯಾವ ರೀತಿಯಲ್ಲಿರಬೇಕು ಎನ್ನುವುದಕ್ಕೆ ಮಾದರಿಯಾಗಿವೆ. ಅಂಥ ಕೆಲವು ಮಾದರಿ ಗ್ರಾಮ ಪಂಚಾಯಿತಿಗಳ ಯಶಸ್ಸಿನ ಕಥನ ಈ ಸಂಚಿಕೆಯ 'ಸುಧಾ' ವಿಶೇಷ. ಏಪ್ರಿಲ್ 24ರ 'ಪಂಚಾಯತ್ ರಾಜ್ ದಿನಾಚರಣೆ' ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಗಳ ಈ ಕಥನ ದೇಶದ ಅಭಿವೃದ್ಧಿಗೆ ಅಗತ್ಯವಾದ ಮಾದರಿಯೊಂದನ್ನು ಸೂಚಿಸುವಂತಿದೆ.

**■ ಗುರುರಾಜ್ ಎಸ್. ದಾವಣಗೆರೆ**

